ಕೊಕ್ಕರೆ, ಆಮೆ ಮೊದಲಾದವುಗಳು ಇಲ್ಲಿ ನೆಮ್ಮದಿಯಿಂದ ನೆಲೆಸಿದ್ದವು.

ಕೆರೆಯ ದಂಡೆಯ ಮೇಲೆ ಕಾಣಿಸುತ್ತಿದ್ದ ಶೆಡ್‌ಗಳತ್ತ ಬೊಟ್ಟು ಮಾಡಿ ಅದೇನು ಎಂದು ನಾಯಕರು ಪುಟ್ಟನನ್ನು ಕೇಳಿದರು. ಅದು ಅಲ್ಲಿ ಹತ್ತಿರದಲ್ಲಿ ಇರುವ ಮನೆ ಮಾಲೀಕರ ಕಾರಿನ ಶೆಡ್‌ಗಳು ಎಂದು ಉತ್ತರಿಸಿದ ಪುಟ್ಟ. ಕೆರೆಯ ಆಸುಪಾಸು ಅಷ್ಟೊಂದು ಮನೆ ಮತ್ತು ಆ ಮನೆಯವರು ಕೆರೆಯ ಆಸುಪಾಸಿನ ಪ್ರದೇಶವನ್ನೆಲ್ಲಾ ತಮ್ಮ ಮನೆಯ ಕಾಂಪೌಂಡಿಗೆ ಸೇರಿಸಿಕೊಂಡಿದ್ದು ಕಂಡು ನಾಯಕರಿಗೆ ವಿಷಾದವೆನಿಸಿತು.

ಒಣಗಿದ ಕೆರೆಯ ತುಂಬಾ ಕಸ ಸಂಗ್ರಹವಾಗಿದ್ದು ಕಾಣುತ್ತಿತ್ತು. ಕೊರೊನಾ ಕಾರಣದಿಂದ ಈಗ ಒಂದೂವರೆ ವರ್ಷಗಳಿಂದ ಆಸುಪಾಸಿನ ಮನೆಗಳೆಲ್ಲೆಲ್ಲಾ ವರ್ಕ್ ಫ್ರಮ್ ಹೋಮ್‌ನವರು ಹೆಚ್ಚಾಗಿದ್ದಾರೆ. ಅಮೆಜಾನ್, ಫ್ಲಿಪ್ ಕಾರ್ಟ್‌ಗಳಿಂದ ಸಾಮಾನುಗಳು ತರಿಸುವವರ ಸಂಖ್ಯೆಯೂ ಹೆಚ್ಚಾಗಿದೆ. ಅವುಗಳೊಂದಿಗೆ ಬರುವ ಭಾರೀ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯವೆಲ್ಲ ಕೆರೆಗೆ ಸೇರುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಆಸುಪಾಸಿನವಷ್ಟೇ ಅಲ್ಲದೇ ದೂರದ ಮನೆಯವರೂ ಬಂದು ಇಲ್ಲಿ ಕಸ ಎಸೆದು ಹೋಗುತ್ತಿದ್ದಾರೆ ಎಂದ ಪುಟ್ಟ.

ಪ್ಲಾಸ್ಟಿಕ್ ಎಂದರೆ ಏನೆಂಬುದೇ ಗೊತ್ತಿರದ ಭರಮಪ್ಪ ನಾಯಕರು ಯಾವ ಪ್ರಪಂಚದಲ್ಲಿ ವಾಸಿಸುತ್ತಿರಬಹುದು ಎಂದು ಪುಟ್ಟನಿಗೆ ಸೋಜಿಗವಾಯಿತು. 'ಮಗೂ, ಆ ಮನೆಗಳ ಮುಂದೆ ಅದೇನು ಇಟ್ಟಿದ್ದಾರೆ..?' ಎಂದು ಅಲ್ಲಿನ ಎಲ್ಲಾ ಮನೆಗಳು ಮುಂದೆ ಇಟ್ಟಿರುವ ನೀಲಿ ಬಣ್ಣದ ನೀರಿನ ಡ್ರಮ್‌ಗಳತ್ತ ಬೊಟ್ಟು ಮಾಡಿ ಪುಟ್ಟನನ್ನು ಪ್ರಶ್ನಿಸಿದರು ಭರಮಪ್ಪ ನಾಯಕರು. ಈ ಬೇಸಿಗೆಯಲ್ಲಿ ನೀರಿಗೆ ತುಂಬಾ ಸಮಸ್ಯೆಯಾಗಿದ್ದು, ಪಂಚಾಯತಿಯವರು ಎರಡು ದಿನಕ್ಕೊಮ್ಮೆ ಟ್ಯಾಂಕರ್ ಮೂಲಕ ಪ್ರತಿ ಮನೆಗಳಿಗೆ 200 ಲೀಟರ್ ನೀರು ಕೊಡುತ್ತಿದ್ದಾರೆ. ಆ ಡ್ರಮ್ ಗಳು ಪಂಚಾಯತಿಯವರು ಕೊಡುವ ನೀರನ್ನು ಸಂಗ್ರಹಿಸಿಕೊಳ್ಳಲು ಇಡಲಾಗಿದೆ ಎಂದು ವಿವರಿಸಿದ ಪುಟ್ಟ.

ಕೆರೆಯ ತಾಜಾ ಸ್ಥಿತಿ, ಆಸು ಪಾಸಿನ ಜನರ ಬದುಕಿನ ವೃತ್ತಾಂತವನ್ನೆಲ್ಲಾ ಪುಟ್ಟನಿಂದ ಕೇಳಿದ ನಾಯಕರು ನಿಟ್ಟುಸಿರೊಂದನ್ನು ಬಿಟ್ಟರು. ಪುಟ್ಟನಲ್ಲಿ ಸುಪ್ತವಾಗಿದ್ದ ಪ್ರಕೃತಿ ಪ್ರೇಮವನ್ನು ಅವರು ಗುರುತಿಸಿದರು. ಒಂದು ಬೆಂಕಿಯ ಕಡ್ಡಿ ಹಲವಾರು ದೀವಿಗೆಗಳನ್ನು ಬೆಳಗಬಹುದು ಎಂದುಕೊಂಡರು ಅವರು. ಪುಟ್ಟನ ಬಳಿ ತನ್ನ ಚಿಕ್ಕ ಕೋರಿಕೆಯೊಂದನ್ನು ಇಟ್ಟರು. ಈ ಕೆರೆ ಮೊದಲು ಸ್ವಚ್ಛವಾಗಬೇಕು, ಇದರ ಹೂಳೆತ್ತಬೇಕು. ಹೊರಗಿನಿಂದ ನೀರು ಬಾರದಂತೆ ತೋಡುಗಳಿಗೆ ಹಾಕಿದ ಅಡ್ಡ ದಂಡೆಗಳನ್ನು ಒಡೆಯಬೇಕು. ಪ್ರತಿ ಮನೆಯಲ್ಲೂ ನೀರು ಇಂಗಿಸುವ ವ್ಯವಸ್ಥೆ ಆಗಬೇಕು ಎಂದರು.

ನಾನೇ ಸ್ವತಃ ಇಲ್ಲಿಗೆ ಬಂದು ಹೀಗೆ ಹೇಳಿರುವುದಾಗಿ ನೀನು ಎಲ್ಲರಿಗೂ ತಿಳಿಸಬೇಕು. ಈಗ ಕತ್ತಲೆಯಾಗುತ್ತಿದೆ. ನನ್ನ ಬಳಿ ಸಮಯವಿಲ್ಲ. ಇನ್ನೊಮ್ಮೆ ಬಂದು ಎಲ್ಲರನ್ನೂ ಭೇಟಿಯಾಗುವೆ ಎಂದು ಲಗುಬಗೆಯಿಂದ ಹೊರಟರು. ಹಿರಿಯ ಜೀವ ಭರಮಪ್ಪ ನಾಯಕರ ಇಚ್ಛೆಯಂತೆ ಕೆರೆಯನ್ನು ಮೊದಲಿನಂತೆ ಮಾಡಲು ಏನೆಲ್ಲಾ ಮಾಡಬೇಕು ಎಂದು ಯೋಚಿಸುತ್ತಾ ಮನೆಯತ್ತ ಹೆಜ್ಜೆ ಹಾಕಿದ ಪುಟ್ಟ.

■ **ಬೈಂದೂರು ಚಂದ್ರಶೇಖರ ನಾವಡ**

# ಪ್ರಾಣಿಗಳ ಹಿರಿಮೆ

ಗೋವು, ಬಹಳ ಸಭ್ಯಪ್ರಾಣಿ
ಕಾಮಧೇನು ಎನಿಸಿದೆ
ಭಕ್ತಿಯಿಂದ ಪೂಜೆಗೊಂಡು
ಜನರನೆಲ್ಲ ತಣಿಸಿದೆ
ಸ್ವಾಮಿನಿಷ್ಠ ನಾಯಿಯೆಂದು
ಹೆಮ್ಮೆಯಿಂದ ಬೀಗಿದೆ
ಸುಲಿಗೆ, ಹತ್ಯೆ ಶೋಧದಲ್ಲಿ
ತನ್ನ ಜಾಣ್ಮೆ ತೋರಿದೆ
ಆನೆ, ಬಹಳ ದೊಡ್ಡ ಪ್ರಾಣಿ
ಶಕ್ತಿಶಾಲಿ ಎನಿಸಿದೆ
ಪೂಜ್ಯರನ್ನು ನೋಡುತಿರಲು
ಭಕ್ತಿಯಿಂದ ನಮಿಸಿದೆ
ಒಂಟೆ, ಮರಳುಗಾಡಿನಲ್ಲಿ
ದೊಡ್ಡ ಪ್ರಾಣಿಯಾಗಿದೆ
ಮರಳುಗಾಡು ಹಡಗವೆಂದು
ಹೆಮ್ಮೆಯಿಂದ ಬೀಗಿದೆ
ಕುದುರೆ, ಭರದಿ ಓಡುವಲ್ಲಿ
ಹೆಸರುವಾಸಿಯಾಗಿದೆ
ರಾಜ, ರಾಣಿ ಹೊತ್ತುಕೊಂಡು
ಹೆಮ್ಮೆಯಿಂದ ಮೆರೆದಿದೆ
ಕರಡಿ, ತನ್ನ ಕುಣಿತದಿಂದ
ಜನಕೆ ಮೋಜು ನೀಡಿದೆ
ಕೃಷ್ಣ ನಮ್ಮ ನೆಂಟನೆಂದು
ಹೆಮ್ಮೆಯಿಂದ ಬೀಗಿದೆ
ಒಂಟೆಯ ಬುದ್ಧಿವಾದ
ಒಂಟೆ, ನರಿಯ ಹೊತ್ತುಕೊಂಡು
ದೊಡ್ಡ ನದಿಯ ದಾಟಿತು
ಕಬ್ಬು ಬೆಳೆದ ತೋಟದತ್ತ
ನರಿಯ ಜೊತೆಗೆ ಬಂದಿತು
ನರಿಯ ಹೊಟ್ಟೆ ತುಂಬುತಿರಲು
ಊಳಿಡುತಲಿ ಓಡಿತು
ಒಂಟೆ ಬಹಳ ಭೀತಿಯಿಂದ
ತಿನ್ನಲೆತ್ನ ಮಾಡಿತು
ರೈತನಿಂದ ಒಂಟೆಯೊಂದೆ
ದೊಣ್ಣೆ ಏಟು ತಿಂದಿತು
ಸಹಿಸದಂತ ನೋವಿನಿಂದ
ನದಿಯ ದಡಕೆ ಬಂದಿತು
ಒಂಟೆ ನರಿಯ ಹೊತ್ತುಕೊಂಡು
ನದಿಯ ಮಧ್ಯೆ ಬಂದಿತು
ಅದಕೆ ಬುದ್ಧಿಕಲಿಸಲೆಂದು
ಮುಳುಗುವಾಸೆ ಎಂದಿತು
ಒಂಟೆ ಮಾತು ಕೇಳುತಿರಲು
ನರಿಗೆ ಭೀತಿ ಹುಟ್ಟಿತು
ತನ್ನ ತಪ್ಪು ಮನ್ನಿಸೆಂದು
ಅರಿಕೆ ಮಾಡಿಕೊಂಡಿತು
ಒಂಟೆ ದಡವ ಸೇರುತಿರಲು
ನರಿಗೆ ಬುದ್ಧಿ ಹೇಳಿತು
ನರಿಯ ಮೋಸ ಮಾಡದಂತೆ
ಒಂಟೆ ಜೊತೆಗೆ ಬಾಳಿತು

■ **ಎಂ.ಎಂ. ಸಂಗಣ್ಣವರ**



ಗಣೇಶ್ ಅರಳೀಕಟ್ಟೆ